**2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**LAC Apepal 104/2025**

**ಪಿ.ಡಬ್ಲ್ಯೂ. 1**

ದಿನಾಂಕಃ **15.07.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್.ಆರ್. ವಕೀಲರಿಂದಃ**

1. ನಮ್ಮ ಜಮೀನು ಯಾವಾಗ ಭೂ ಸ್ವಾಧೀನವಾಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. 2001 ರಲ್ಲಿ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸರಿ. ಆಗ ನಾನು ಗುಬ್ಬಿ ನ್ಯಾಯಾಲಯದಲ್ಲಿ ಹೆಚ್ಚಿನ ಪರಿಹಾರವನ್ನು ಕೋರಿ ದಾವೆ ಹಾಕಿದ್ದೇವೆ ಎಂದರೆ ಸರಿ. ಗುಬ್ಬಿ ನ್ಯಾಯಾಲಯದಲ್ಲಿ ನಾನು ನನ್ನ ಸಾಕ್ಷಿಯನ್ನು ಕೊಟ್ಟಿರುತ್ತೇನೆ. ದಾವೆಯು ಯಾವ ಸ್ಟೇಜ್‌ನಲ್ಲಿ ಇದೆ ಎಂದು ನನ್ನ ವಕೀಲರು ಹೇಳಿರುತ್ತಾರೆ ಎಂದರೆ ಸರಿ. ಯಾವ ವರ್ಷದಲ್ಲಿ ಗುಬ್ಬಿ ನ್ಯಾಯಾಲಯದಲ್ಲಿ ತೀರ್ಪು ಬಂದಿರುತ್ತದೆ ಎಂದು ನನಗೆ ಮರೆತಿದ್ದೇನೆ. ಆದರೆ ತೀರ್ಪಿನ ಬಗ್ಗೆ ನಮ್ಮ ವಕೀಲರು ನನಗೆ ಹೇಳಿರುತ್ತಾರೆ. ತೀರ್ಪಿನ ನಂತರ ಎದುರುದಾರರಿಂದ ನಾವು ಪರಿಹಾರದ ಹಣವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ತಕ್ಷಣ ನಾವು ಬಂದು ಈ ದಾವೆಯನ್ನು ಹಾಕಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಎಷ್ಟು ವರ್ಷ ತಡವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಆ ಕಾರಣದಿಂದ ನನ್ನ ಅರ್ಜಿ ವಜಾ ಆಗಬೇಕು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

**2** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು